# ಪ್ರೀತಿಯ ಮಕ್ಕಳೇ ದಯವಿಟ್ಟು ಗಮನಿಸಿ!

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ




ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ನಾವು, ಹಳ್ಳಿಯಲ್ಲಿ, ಶಾಲೆಯಲ್ಲಿ ಮತ್ತು ನಿಮ್ಮ ಮನೆಯಲ್ಲಿ ಸಹ ಮಕ್ಕಳ ಜೀವನವನ್ನು ಉತ್ತಮಗೊಳಿಸಲು ಮಕ್ಕಳ ಗ್ರಾಮಸಭೆಗಳ ಮೂಲಕ ನಿಮ್ಮ ಸಮಸ್ಯೆಗಳನ್ನು ಹಾಗೂ ಸಲಹೆಗಳನ್ನು ಕೇಳಿಸಿಕೊಳ್ಳುತ್ತಿದ್ದೆವು.

ಈ ವರ್ಷ ಕೋವಿಡ್–19 ನಿಂದಾಗಿ ನಾವು ನಿಮ್ಮನ್ನು ಮುಖಾಮುಖಿ ಭೇಟಿಯಾಗಲು ಸಾಧ್ಯವಾಗುತ್ತಿಲ್ಲ ಹಾಗಾಗಿ, ನಾವು ನಿಮ್ಮನ್ನು ತಲುಪಲು ಹಾಗೂ ನಿಮ್ಮ ಧನಿಗಳನ್ನು ಕೇಳಿಸಿಕೊಳ್ಳಲು ಹೊಸ ಮಾರ್ಗಗಳನ್ನು ಕಂಡುಕೊಂಡಿದ್ದೇವೆ.

## ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?

- **ನಿಮ್ಮ ಹಳ್ಳಿಯಲ್ಲಿ** - ಮೂಲಭೂತ ಸೌಲಭ್ಯಗಳಾದಂತಹ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ/ಕಾಲೇಜು/ಅಂಗನವಾಡಿ ಸೌಲಭ್ಯಗಳು, ಮುಂತಾದವುಗಳು?
- **ಮನೆಯಲ್ಲಿ** – ನಿಮಗೆ ಪೌಷ್ಟಿಕ ಆಹಾರ ದೋರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಏನಾದರು ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?

CHILD LINE 1098 NIGHT & DAY

| | | | | |
|---|---|---|---|---|
| ನಿಮ್ಮ ಸುತ್ತಲೂ ನೋಡಿ! | ನಿಮ್ಮ ಹಳ್ಳಿಯಲ್ಲಿನ ಸಮಸ್ಯೆಗಳ ಬಗ್ಗೆ ಆಲೋಚಿಸಿ | ಮನೆಯಲ್ಲಿನ ಸಮಸ್ಯೆಗಳು | ನಿಮ್ಮ ಸುರಕ್ಷತೆ ಹಾಗೂ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳು (ನಿಂದನೆ, ಬಾಲ್ಯ ವಿವಾಹ, ದೌರ್ಜನ್ಯ, ಶಾಲೆ ಬಿಟ್ಟಿರುವುದು, ಜೀತ ಪದ್ದತಿ, ಬಾಲ ಕಾರ್ಮಿಕ ಪದ್ದತಿ, ಮಕ್ಕಳ ಕಳ್ಳ ಸಾಗಣಿಕೆ ಇತರೆ ಯಾವುದೇ ಸಂಕಷ್ಟಗಳು) | ನಿಮಗೆ ತೊಂದರೆ ಉಂಟು ಮಾಡುತ್ತಿರುವ ಯಾವುದಾದರೂ ಸಮಸ್ಯೆಗಳು |

## ಮಕ್ಕಳು ಹುಟ್ಟುತ್ತಲೇ ಪ್ರಜೆಗಳು!

ನೀವು ಒಬ್ಬ ಸಕ್ರಿಯ ನಾಗರಿಕರಾಗಲು, ಬೆಳೆದು ದೊಡ್ಡವರಾಗಲೆಬೇಕೆಂದಿಲ್ಲ!

## ಮಕ್ಕಳ ಕೋರಿಕೆ ಪತ್ರ

- ಯಾವುದೇ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ/ಕಾಲೇಜು ಶಿಕ್ಷಕರಿಂದ ಮಕ್ಕಳ ಕೋರಿಕೆ ಪತ್ರವನ್ನು ಪಡೆಯಿರಿ ಹಾಗೂ ಅದರಲ್ಲಿ ನಿಮ್ಮ ಸಮಸ್ಯೆಗಳನ್ನು ಭರ್ತಿಮಾಡಿ
- ನಿಮ್ಮ ಕೋರಿಕೆ ಪತ್ರವನ್ನು ನಿಮ್ಮ ಶಾಲೆಯ/ಕಾಲೇಜು ಶಿಕ್ಷಕರು ಅಥವಾ ಅಂಗನವಾಡಿ ಶಿಕ್ಷಕರಿಗೆ ಹಿಂತಿರುಗಿಸಿ
- ನಿಮ್ಮ ಹತ್ತಿರದ ಶಾಲೆಯಲ್ಲಿ/ ಕಾಲೇಜಿನಲ್ಲಿ/ಅಂಗನವಾಡಿಯಲ್ಲಿ/ ಡೈರಿ ಕೇಂದ್ರ/ ಪಂಚಾಯತ್ ಕಚೇರಿ/ ನ್ಯಾಯಬೆಲೆ ಅಂಗಡಿ, ಅಂಚೆ ಕಚೇರಿ ಅಥವಾ ಬ್ಯಾಂಕ್ ಈ ಸ್ಥಳದಲ್ಲಿ ಇಟ್ಟಿರುವ ಮಕ್ಕಳ ಧನಿ ಬಾಕ್ಸ್‌ನಲ್ಲಿ ಹಾಕಿ



## ಮಕ್ಕಳ ಧನಿ ಬಾಕ್ಸ್

- **ಮಕ್ಕಳೇ** –ನಿಮ್ಮ ಸಮಸ್ಯೆಗಳು/ಸಲಹೆಗಳನ್ನು/ಪ್ರಶ್ನೆಗಳನ್ನು **ಮಕ್ಕಳ ಕೋರಿಕೆ ಪತ್ರದಲ್ಲಿ** ಬರೆದು ಈ **ಮಕ್ಕಳ ಧನಿ ಬಾಕ್ಸ್‌ನಲ್ಲಿ** ಹಾಕಿ
- ಕೋರಿಕೆ ಪತ್ರ ಸಿಗದಿದ್ದಲ್ಲಿ ಒಂದು ಹಾಳೆಯಲ್ಲಿಯು ಕೂಡ ಬರೆದು ಹಾಕಬಹುದು

